# “ಶ್ರೀ ರಾಮಾಯಣ ದರ್ಶನಂ ವಾಚಾಕಾಭಿನಯ”

## 06-March-2019

ಕುವೆಂಪುರವರು ಈ ಜಗದ ಮಹಾ ಚೇತನ ಕನ್ನಡಕ್ಕೆ ಪ್ರಥಮ ಜ್ಞಾನಪೀಠ ಪ್ರಶಸ್ತಿಯನ್ನು ತಂದು ಕೊಟ್ಟಂತಹ ಮಹಾ ಕವಿ ಕುವೆಂಪು ಎಂದು ಖ್ಯಾತ ರಂಗಕರ್ಮಿ **ಉಡುಪಿಯ ಎಂ.ಗಣೇಶ್** ಅಭಿಪ್ರಾಯ ಪಟ್ಟರು.



















ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ವಿಭಾಗದಿಂದ ಇಂದು ಏರ್ಪಡಿಸಿದ್ದ **“ಶ್ರೀ ರಾಮಾಯಣ ದರ್ಶನಂ ವಾಚಾಕಾಭಿನಯ”** ಎಂಬ ಅವಿಸ್ಮರಣೀಯವಾದ ಕಾರ್ಯಕ್ರಮದಲ್ಲಿ ಜ್ಞಾನಪೀಠ ಪ್ರಶಸ್ತಿ ಬಂದು ೫೦ ವರ್ಷ ತುಂಬಿದ ಸುಸಂದರ್ಭದಲ್ಲಿ ಶ್ರೀ ರಾಮಾಯಣ ದರ್ಶನಂ –ಕಾವ್ಯದ ಆಯ್ದ ಭಾಗಗಳನ್ನು ಅದ್ಭುತವಾಗಿ ಅಭಿನಯ ಪೂರ್ವಕವಾಗಿ ವಾಚಿಸಿ ನೆರೆದಿದ್ದ ವಿದ್ಯಾರ್ಥಿ ಸಮುದಾಯಕ್ಕೆ ಕಾವ್ಯದ ಸವಿಯನ್ನು ಸವಿಯುವಂತೆ ಮಾಡಿದರು.










ಕಾರ್ಯಕ್ರಮವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸಾಹಿತಿ **ಎಚ್.ಆರ್. ಸುಜಾತ ಉದ್ಘಾಟಿಸಿದರು.** ಮುಖ್ಯ ಅತಿಥಿಗಳಾಗಿ ಖ್ಯಾತ ಪರ್ತಕರ್ತ ಹಾಗು ನಾಟಕ ಅಕಾಡೆಮಿಯ ಸದಸ್ಯ ಗಣೇಶ್ ಅಮೀನ್‌ಗಡ್ ಭಾಗವಹಿಸಿದ್ದರು. ಕಾರ್ಯಕ್ರಮದ ಸ್ವಾಗತವನ್ನು ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಧನಂಜಯ ಪಾಲಹಳ್ಳಿಯವರು ಮಾಡಿದರೆ, ನಿರೂಪಿಸಿ ವಂದಿಸಿದವರು ಸಹಾಯಕ ಪ್ರಾಧ್ಯಾಪಕರಾದ ಡಾ.ಶ್ರೀನಿವಾಸ.ಟಿ. ವಿದ್ಯಾರ್ಥಿಗಳು ಹಾಗು ಸಹಾಯಕ ಪ್ರಾಧ್ಯಾಪಕ ಮಂಜು.ಜೆ.ಭಾಗವಹಿಸಿದ್ದರು.

